ಹೊಸ ತಾಲ್ಲೂಕುಗಳ ಮರು ವಿಂಗಡಣೆ

862 (1501); ಶ್ರೀ ಅರವಿಂದ ಚಂದ್ರಕಾಂತ ಬೆಲ್ಲದ (ಹುಬ್ಬಳ್ಳಿ–ಧಾರವಾಡ ಪಶ್ಚಿಮ)

ಅ) ಧಾರವಾಡ ಜಿಲ್ಲೆಯಲ್ಲಿ ಹೊಸದಾಗಿ ತಾಲ್ಲೂಕುಗಳನ್ನು ಘೋಷಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಹೊಸದಾಗಿ ರಚಿಸಲಾಗುವ ತಾಲ್ಲೂಕುಗಳಿಗೆ ಯಾವ ಯಾವ ಗ್ರಾಮ ಸೇರ್ಪಡೆಗೊಳಿಸಲಾಗಿದೆ? (ಮಾಹಿತಿ ನೀಡುವುದು)

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ರಾಜ್ಯ ಸರ್ಕಾರ ದಿನಾಂಕ: 08.02.2013 ರಂದು ಮಂಡಿಸಿದ 2013–14ನೇ ಆಯವ್ಯಯದಲ್ಲಿ 43 ಹೊಸ ತಾಲ್ಲೂಕುಗಳನ್ನು ರಚಿಸುವುದಾಗಿ ಘೋಷಿಸಿದ್ದು, ಇವುಗಳಲ್ಲಿ ಧಾರವಾಡ ಜಿಲ್ಲೆಯ ಅಣ್ಣಿಗೇರಿ, ಅಳ್ನಾವರ ಮತ್ತು ಹುಬ್ಬಳ್ಳಿ ನಗರಗಳು ಸೇರಿರುತ್ತವೆ.

ಆ) ತಾಲ್ಲೂಕುಗಳನ್ನು ರಚಿಸಿದ ನಂತರ ಮಾಹಿತಿ ಲಭ್ಯವಾಗುತ್ತದೆ.

ಬ್ಯಾರೇಜ್ ಕೆರೆಗಳ ಅಭಿವೃದ್ಧಿ ಕಾಮಗಾರಿ

863 (1502); ಶ್ರೀ ಅರವಿಂದ ಚಂದ್ರಕಾಂತ ಬೆಲ್ಲದ

ಅ) ಸಣ್ಣ ನೀರಾವರಿ ಇಲಾಖೆಯಲ್ಲಿ ಕೈಗೊಳ್ಳುವ ಬ್ಯಾರೇಜ್ ಕೆರೆಗಳ ಅಭಿವೃದ್ಧಿಯ ಕಾಮಗಾರಿಗಳಿಗೆ ಮೂರು ವರ್ಷಗಳಲ್ಲಿ ಮೂರು ಕಂತಿನ ಮೂಲಕ ಹಣ ಬಿಡುಗಡೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ವತಿಯಿಂದ ಮಾಡುವ ಕಾಮಗಾರಿಗಳನ್ನು ಕೇವಲ ಒಂದೇ